# ತ್ರಿವಿಧ ದಾಸೋಹಿಗೆ ನಮನ!

ಕನ್ನಡ ನಾಡಿನಲ್ಲಿ ಇಂದಿಗೂ ಮೂರು ವಿಧದ ದಾಸೋಹ ಮಾಡುತ್ತಾ ಶತಮಾನ ದಾಟಿದ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಗಳು ನಾಡಿನ ಹೆಮ್ಮೆಯ ಮೇರು ಪರ್ವತ. ಅವರ ಸುಂದರ ಉಬ್ಬುಶಿಲ್ಪವನ್ನು ಮಠದ ಮುಂದೆ ಬಂಡೆಗಲ್ಲಿನಲ್ಲಿ ಕೆತ್ತಲಾಗಿದೆ. ಅದರ ಪಕ್ಕದಲ್ಲಿ ಬಸವಣ್ಣನವರನ್ನು ಮೂಡಿಸಲಾಗಿದೆ. ಮಠಕ್ಕೆ ಬರುವ ಭಕ್ತರಿಗೆ ಈ ಶಿಲ್ಪ ಒಂದು ಆಕರ್ಷಣೀಯ ಕೇಂದ್ರವಾಗಿದೆ.

**-ಕೆ.ಜೆ. ಜ್ಯೋತಿಪ್ರಭಾ, ಕುಮಟಾ**





# ನವಿಲಿನಂಥ ಚಿಟ್ಟೆ

ಮೂಡುಬಿದಿರೆ ಸನಿಹದ ಬೆಳುವಾಯಿಯಲ್ಲಿ 7.35 ಎಕರೆ ವಿಸ್ತಾರದಲ್ಲಿನ ಸಮ್ಮಿಲನ ಶೆಟ್ಟೀಸ್ ಬಟರ್ ಫ್ಲೈ ಪಾರ್ಕ್‌ಗೆ ಈಚೆಗೆ ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ನ ಲಂಡನ್ ಗೌರವ ದೊರಕಿದೆ.

ಈ ಚಿಟ್ಟೆ ಪಾರ್ಕ್‌ನಲ್ಲಿ ಬಣ್ಣ ಬಣ್ಣದ 147 ಚಿಟ್ಟೆಗಳಿದ್ದು, ಪಶ್ಚಿಮ ಘಟ್ಟದಲ್ಲಿ ಮಾತ್ರ ಕಂಡು ಬರುವ ಮಲಬಾರ್ ಬ್ಯಾಂಡೆಡ್ ಪೀಕಾಕ್ ಚಿಟ್ಟೆ ಪಾರ್ಕಿಗೆ ಭೇಟಿ ನೀಡುವವರಿಗೆ ಪ್ರಮುಖ ಆಕರ್ಷಣೆಯಾಗಿದೆ. ಪಾರ್ಕಿಗೆ ಆಗಮಿಸುವವರಿಗೆ ಜೂನ್– ನವೆಂಬರ್ ಸೂಕ್ತಕಾಲ ಎಂದು ಸಮ್ಮಿಲನ ಶೆಟ್ಟಿ ಹೇಳುತ್ತಾರೆ.

**-ರತ್ನಾಕರ ಹೆಗಡೆಕಟ್ಟೆ, ಮೂಡುಬಿದರೆ**

# ‘ಜಗಳಗಂಟಿ’ ಗಿಡ!

ಒಂದು ನೆಲ, ನದಿ, ಗುಡ್ಡ ಬೆಟ್ಟ, ಗಿಡ ಮರ ಕೆಲ ಪ್ರಾಣಿಗಳಿಗೆ ಮನುಷ್ಯರಿಡುವ ಹೆಸರಿನಲ್ಲಿ ಏನೋ ಗುಣ ವಿಶೇಷತೆಯ ಒಂದು ಹಿನ್ನಲೆ ಇದ್ದೇ ಇರುತ್ತದೆ. ಹಾಗೇ ಅದಾವ ಹಿನ್ನೆಲೆಯಲ್ಲಿ ಈ ಒಂದು ಮರಕ್ಕೆ ‘ಜಗಳ ಗಂಟಿ’ ಎಂದು ಕರೆದಿದ್ದಾರೋ ಅದೇನು ಕಾರಣವೋ ಗೊತ್ತಿಲ್ಲ! ಈ ಮರದ ಕಟ್ಟಿಗೆಯನ್ನು ಯಾರೂ ಒಲೆಗೆ ಉರುವಲಾಗಿ ಬಳಸುವುದಿಲ್ಲ. ಮನೆ ಗುಡಿಸಿಲಿಗೆ ಮರ ಮುಟ್ಟಾಗಿ ಹಾಕುವುದಿಲ್ಲ. ಅದರ ಯಾವ ಗುಣದಿಂದ ಈ ರೀತಿಯ ಬಳಕೆಯ ನಿಷೇಧ? ಬಹುಶಃ ಇದನ್ನು ಉರಿಸಿದಾಗ ಬರುವ ಹೊಗೆ, ಚಕ್ಕೆ ಕಟ್ಟಿಗೆಯಿಂದ ಹೊರ ಬರುವ ಒಂದು ರೀತಿಯ ವಾಸನೆ ಮನಸ್ಸಿಗೆ ಕಿರಿ ಕಿರಿ ಉಂಟು ಮಾಡಿ, ಜಗಳ ತರುವುದನ್ನು ಅನುಭವದಿಂದ ಕಂಡ ಜನಪದರು ಗಿಡಕ್ಕೆ ಈ ಹೆಸರು ಕರೆದಿರಬಹುದು.

**-ಎಸ್. ಓಂಕಾರಯ್ಯ, ತವನಿಧಿ, ಬೆಂಗಳೂರು**

